## ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

**ಓ.ಎಸ್. ಸಂಖ್ಯೆ 284/2015**

<u>ದಿನಾಂಕ **10.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

ಡಿ.ಡಬ್ಲೂ-4

| | | |
|---|---|---|
| ಸಾಕ್ಷಿದಾರರ ಹೆಸರು | - | ಕೆ.ರಾಜಗೋಪಾಲರೆಡ್ಡಿ |
| ತಂದೆಯ ಹೆಸರು | - | ಕೆ.ಭೀಮೇಗೌಡ |
| ವಯಸ್ಸು | - | 87 ವರ್ಷ |
| ವೃತ್ತಿ | - | ಪತ್ರ ಬರಹಗಾರರು |
| ವಾಸ ಸ್ಥಳ | - | ಕೊತ್ತೂರು ಗ್ರಾಮ |

<u>ಮುಖ್ಯ ವಿಚಾರಣೆಃ ಪ್ರತಿವಾದಿಯ ಪರ ಶ್ರೀ ಪಿ.ವಿ.ವೈ. ವಕೀಲರಿಂದಃ</u>

ನಾನು ಈ ದಾವಾದಲ್ಲಿ ನಾನು ಪ್ರತಿವಾದಿಯ ಪರವಾಗಿ ಸಾಕ್ಷಿ ನುಡಿಯಲು ಬಂದಿದ್ದೇನೆ. ನಾನು ನನ್ನ ಮುಖ್ಯ ವಿಚಾರಣೆಯನ್ನು ಸಾಕ್ಷ್ಯ ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಖುದ್ದಾಗಿ ಬರೆಯಿಸಿರುತ್ತೇನೆ ಹಾಗೂ ಅದರಲ್ಲಿರುವ ಅಂಶಗಳು ಸತ್ಯವೆಂದು ಪ್ರಮಾಣೀಕರಿಸಿ ಸಹಿ ಮಾಡಿರುತ್ತೇನೆ.

ಸಾಕ್ಷಿಗೆ ನಿಡಿ.1 ದಾಖಲೆಯನ್ನು ತೋರಿಸಲಾಯಿತು. ಅದರಲ್ಲಿನ ತನ್ನ ಸಹಿಯನ್ನು ನಿಡಿ.1(ಬಿ) ಎಂದು ಗುರುತಿಸಲಾಯಿತು. ನಿಡಿ.1 ದಾಖಲೆಯನ್ನು ನಾನೇ ತಯಾರಿಸಿರುತ್ತೇನೆ. ಅದನ್ನು ತಯಾರಿಸಲು ನನಗೆ ಗಂಗಮ್ಮ ನವರು ಮಾಹಿತಿ ನೀಡಿದ್ದು ಅದರಂತೆ ತಯಾರಿಸಿರುತ್ತೇನೆ. ನನ್ನ ಸಮಕ್ಷಮ ಗಂಗಮ್ಮ, ಸಾಕ್ಷಿಗಳಾಗಿ ಉಗ್ರಮೂರ್ತಿ ಮತ್ತು ಸುಬ್ಬಾರೆಡ್ಡಿ ಎನ್ನುವವರು ನಿಡಿ.1 ಕ್ಕೆ ಸಹಿ ಮಾಡಿದ್ದಾರೆ. ಸಾಕ್ಷಿ ನಿಡಿ.1 ರಲ್ಲಿ ಗಂಗಮ್ಮನವರ ಸಹಿ ಎಂದು ಒಪ್ಪಿತ ಬರೆದ ಪದದ ಕೆಳಗಿನ ಸಹಿ ಮತ್ತು ಮೊದಲನೇ ಪುಟದ ಗಂಗಮ್ಮ ಎನ್ನುವ ಸಹಿಯನ್ನು ಗುರುತಿಸಿರುತ್ತಾರೆ. ಗಂಗಮ್ಮ ನವರು ಇಂಗ್ಲಿಷ್ ನಲ್ಲಿ ಸಹಿ ಮಾಡಿರುತ್ತಾರೆ. ಗಂಗಮ್ಮನವರು ಸಹಿ ಮಾಡುವಾಗ ಇಬ್ಬರು ಸಾಕ್ಷಿದಾರರು ನೋಡಿರುತ್ತಾರೆ. 1 ನೇ ಸಾಕ್ಷಿ

ಮತ್ತು 2ನೇ ಸಾಕ್ಷಿಗಳು ಸಹಿ ಮಾಡುವಾಗ ನಾನು ಮತ್ತು ಗಂಗಮ್ಮನವರು ನೋಡಿರುತ್ತೇವೆ.

(ಈ ಹಂತದಲ್ಲಿ ವಾದಿಪರ ಶ್ರೀ ಐ.ಆರ್.ಎಲ್. ವಕೀಲರು ಪಾಟೀ ಸವಾಲು ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು)

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಪಾವಗಡ